ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ :– ಇನ್ನೂ ಎರಡು ಚಿಕ್ಕ ಬಿಲ್ಲುಗಳು ಇವೆ. ಅದರಲ್ಲಿ ಒಂದು 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದು. 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು, ಸರ್ಕಾರವು ಹಿಂದಕ್ಕೆ ತೆಗೆದುಕೊಳ್ಳಲು ಬಯಸುತ್ತದೆ ಎಂಬುದನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಪ್ರಸ್ತಾವದ ಅಂಗೀಕಾರ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳ ಪರವಾಗಿ) :– 1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನಿರಶನ) ವಿಧೇಯಕವನ್ನು ಹಿಂತೆಗೆದುಕೊಳ್ಳುವುದನ್ನು ಅಂಗೀಕರಿಸುವುದು.

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು ಮತ್ತು ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮೋದನೆ ನೀಡಲಾಯಿತು.

ಪರ್ಯಾಲೋಚನಾ ಪ್ರಸ್ತಾವ

1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ)(ತಿದ್ದುಪಡಿ) ವಿಧೇಯಕ

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) (ಸಾರಿಗೆ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, "1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) (ಸಾರಿಗೆ ಮತ್ತು ವಕ್ಫ್ ಮಂತ್ರಿಗಳ ಪರವಾಗಿ) :– ಮಾನ್ಯ ಉಪಾಧ್ಯಕ್ಷರೆ, ಇದು ತುಂಬಾ ಸರಳವಾದ ಒಂದು ತಿದ್ದುಪಡಿ ವಿಧೇಯಕ. ಮ್ಯಾಕ್ಸಿ ಕ್ಯಾಬ್‌ಗೆ ಮೊದಲಿನಿಂದಲೂ ಪರ್ಮಿಷನ್ ಕೊಟ್ಟಿದ್ದೇವೆ. ಆದರೆ ಕಾಂಟ್ರಾಕ್ಟ್ ಕ್ಯಾರೇಜಸ್ ಅಕ್ವಿಜಿಷನ್ ಆಕ್ಟ್ 1976 ರ ಪ್ರಕಾರ 6 ಜನ ಪ್ಯಾಸೆಂಜರ್ಸ್‌ಗಿಂತ ಜಾಸ್ತಿ ನಾವು ಅನುಮತಿ ಕೊಡುವುದಕ್ಕೆ ಆಗುತ್ತಿರಲಿಲ್ಲ. 12-

ಜನ ಪ್ಯಾಸೆಂಜರ್ಸ್‌ಗೆ ಟ್ಯಾಕ್ಸ್ ಕಲೆಕ್ಟ್ ಮಾಡಿದರೂ ಸಹ ಆರ್. ಸಿ. ಬುಕ್‌ನಲ್ಲಿ 6 ಪ್ಯಾಸೆಂಜರ್ಸ್ ಎಂದು ಹಾಕುತ್ತಿದ್ದವು. ಈಗ ತಮಗೆ ಗೊತ್ತಿರುವ ಹಾಗೆ ಎರಡುಮೂರು ಸಲ ಮೆಟಡಾರ್ ಮಾಲೀಕರು ಮುಷ್ಕರ ಮಾಡಿದರು. ಇದನ್ನು ತಪ್ಪಿಸುವುದಕ್ಕೆಕಾಂಟ್ರಾಕ್ಟ್ ಕ್ಯಾರೇಜಸ್ ಅಕ್ವಿಜಿಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದಿದ್ದೇವೆ. ಇದೇ ಆಕ್ಟ್ ಪ್ರಕಾರ ಬಸ್‌ಗಳನ್ನು ಸರಕಾರದವರು ವಶಪಡಿಸಿಕೊಂಡಾಗ ಆ ಬಸ್‌ಗಳ ಹಣವನ್ನು ಸರಕಾರ ಬ್ಯಾಂಕಿಗೆ ಕಟ್ಟಬೇಕಾಗುತ್ತಿತ್ತು. ಇವಕ್ಕೆ ಶೇಕಡಾ 6 ರಷ್ಟು ಬಡ್ಡಿಯನ್ನು ಕೊಡುತ್ತಿದ್ದೆವು ಆದರೆ ಇಂಡಿಯನ್ ಬ್ಯಾಂಕಿಂಗ್ ಅಸೋಸಿಯೇಷನ್‌ನವರು ಮತ್ತು ಹೋಮ್ ಮಿನಿಸ್ಟರ್‌ರವರು ಇದಕ್ಕೆ ಶೇಕಡ 12 ರಷ್ಟು ಬಡ್ಡಿಯನ್ನು ಕೊಡಬೇಕೆಂದು ಕೇಳಿಕೊಂಡಿದ್ದರು. ಆದುದರಿಂದ ಬಡ್ಡಿದರವನ್ನು ಶೇಕಡ 12 ರಷ್ಟು ಮಾಡುವುದಕ್ಕೆ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧ ಪಕ್ಷದ ಉಪನಾಯಕರು):– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ಸದನದ ಒಪ್ಪಿಗೆಗೋಸ್ಕರ ಏನು ಮಸೂದೆಯನ್ನು ಇಟ್ಟಿದ್ದಾರೆ. ಅದರ ಒಂದು ಭಾಗವನ್ನು ನಾನು ಒಪ್ಪುತ್ತೇನೆ. ಕಾಂಟ್ರಾಕ್ಟ್ ಕ್ಯಾರಿಯೇಜಸ್ ಆಕ್ಟ್ ಪ್ರಕಾರ ಕರ್ನಾಟಕದಲ್ಲಿ ಸುಮಾರು ಒಂದು ಸಾವಿರ ಬಸ್‌ಗಳನ್ನು ತೆಗೆದುಕೊಂಡ ಸಂದರ್ಭದಲ್ಲಿ ಆ ಬಸ್‌ಗಳ ದುಡ್ಡನ್ನು ಬಸ್‌ಮಾಲೀಕರಿಗೆ ಕೊಡಬೇಕಾಗುತ್ತಿತ್ತು, ಅದನ್ನು ಅವರು ಬ್ಯಾಂಕ್‌ಗೆ ತಲುಪಿಸಬೇಕಾಗುತ್ತಿತ್ತು. ಈಗ ಇಲ್ಲಿ ಬಸ್ ಮಾಲೀಕರ ಪ್ರಶ್ನೆ ಬರುವುದಿಲ್ಲ. ದುಡ್ಡು ಹೋಗಬೇಕಾಗಿರುವುದು ನ್ಯಾಷನಲೈಸ್ಡ್ ಬ್ಯಾಂಕ್ಸ್‌ಗೆ. ಅದಕ್ಕೆ ಬಡ್ಡಿ ದರ ಆರು ಪರ್ಸೆಂಟ್ ಆಗುವುದಿಲ್ಲ. 12 ಪರ್ಸೆಂಟ್ ಬೇಕೆಂದು ಕೇಳುತ್ತಿದ್ದಾರೆ. ಇದರಿಂದಾಗಿ ಅದಿಸನಲ್ ಇಂಟರೆಸ್ಟ್ ಒಂದೂವರೆ ಕೋಟಿ ರೂಪಾಯಿ ಆಗುವುದರಿಂದ ಬರ್ಡನ್ ಜಾಸ್ತಿಯಾಗುತ್ತದೆ. ಇಂಟರೆಸ್ಟ್ ರೇಟನ್ನು ಜಾಸ್ತಿ ಮಾಡಬೇಕೆಂದು ನ್ಯಾಷನಲೈಸ್ಡ್ ಬ್ಯಾಂಕ್‌ನವರು ಕೇಳುತ್ತಿದ್ದಾರೆ. ಇಂಟರೆಸ್ಟ್ ರೇಟನ್ನು ಜಾಸ್ತಿ ಮಾಡುವುದಕ್ಕೆ ತೆಗೆದುಕೊಂಡು ಬಂದಿರತಕ್ಕಂಥ ವಿಚಾರ ಸರಿ ಇದೆ. ಆದರೆ ಇದು ಎಷ್ಟು ದಿವಸ ಎಂದು ಹೇಳಿ ಸರಕಾರ ಈ ರೀತಿ ಕೊಡುವುದು ಎಷ್ಟು ದಿವಸ ಬಾಕಿ ಇಟ್ಟುಕೊಳ್ಳುವುದಕ್ಕೆ ಆಗುತ್ತದೆ ? ಈ ಸಂದರ್ಭದಲ್ಲಿ ನಾನು ಮಾನ್ಯ ಸಾರಿಗೆ ಮಂತ್ರಿಗಳಿಂದ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಂದ ಏನು ಭರವಸೆಯನ್ನು ಕೇಳುತ್ತಿದ್ದೇನೆ ಎಂದರೆ, ಈ ಸಾಲವನ್ನು ಆದಷ್ಟು ಬೇಗ ತೀರಿಸಬೇಕು. ಈಗೇನಾಗಿದೆ ಎಂದರೆ ಕೆಲವು ಬಸ್ ಮಾಲೀಕರುಗಳಿಂದ ಬಸ್‌ನ್ನು ತೆಗೆದುಕೊಂಡಿರಿ, ಅವರು ಉದ್ಯೋಗ ಕಳೆದುಕೊಂಡರು, ಅವರು ಬೇರೆ ಉದ್ಯೋಗಗಳಿಗೂ ಹೊರಟು ಹೋಗಿದ್ದಾರೆ. ಯಾರೂ ಬಸ್ ಮಾಲೀಕರಾಗಿ ಉಳಿದಿಲ್ಲ. ತೊಂದರೆ ಏನಾಗಿದೆ ಎಂದರೆ ಬೇರೆ ಪ್ರಾಪರ್ಟಿಯನ್ನು ಸೆಕ್ಯೂರಿಟಿ ಇಟ್ಟು ಬ್ಯಾಂಕಿನಿಂದ ದುಡ್ಡು ತೆಗೆದುಕೊಂಡಿದ್ದರು. ಈಗ ಆ ಪ್ರಾಪರ್ಟಿಯನ್ನು ಅವರು ಬಿಡಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆದನ್ನು ಬ್ಯಾಂಕ್‌ನವರೇ ಇಟ್ಟುಕೊಂಡಿದ್ದಾರೆ. ಇದರಿಂದ ಬಸ್ ಓನರ್ಸ್‌ಗೆ ತೊಂದರೆಯಾಗಿದೆ. 15–20 ಬಸ್ ಇಟ್ಟುಕೊಂಡಿದ್ದವರಿಗೆ ತೊಂದರೆಯಾಗಿಲ್ಲ. ಆದರೆ ಒಂದೆರಡು ಬಸ್‌ಗಳನ್ನು ಇಟ್ಟುಕೊಂಡವರಿಗೆ ತೊಂದರೆಯಾಗಿದೆ. ಕಾಂಟ್ರಾಕ್ಟ್ ಕ್ಯಾರಿಯೇಜಸ್ ಓನರ್ಸ್ ಪರವಾಗಿ ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಕೋಟ್ಯಾಂತರ ರೂಪಾಯಿಗಳ ದುಡ್ಡು ಕೊಡ ತಕ್ಕದ್ದು ಇದೆ. ಈಗ 6 ಪರ್ಸೆಂಟ್ ಬಡ್ಡಿ ಇದ್ದುದನ್ನು 12 ಪರ್ಸೆಂಟ ಎಂದು ಇನ್ನೂ ಒಂದೂವರೆ ಕೋಟಿ ರೂಪಾಯಿ ಜಾಸ್ತಿಯಾಗುತ್ತದೆ. ಅಂದರೆ ವರ್ಷಕ್ಕೆ ಮೂರು ಕೋಟಿ ರೂಪಾಯಿ ಬಡ್ಡಿ ರೂಪದಲ್ಲಿ ಕೊಡಬೇಕಾಗುತ್ತದೆ. ಇದರಿಂದ ಬಸ್ ಮಾಲೀಕರುಗಳಿಗೂ ತೊಂದರೆಯಾಗುತ್ತಿದೆ. ದೊಡ್ಡ ದೊಡ್ಡ 30–40 ಬಸ್ ಕಳೆದುಕೊಂಡವರಿಗೆ ತೊಂದರೆ ಇಲ್ಲ. ಆದರೆ ಒಂದು ಎರಡು ಬಸ್ ಕಳೆದುಕೊಂಡವರು ಅವರ ಪ್ರಾಪರ್ಟಿಯನ್ನು ಬ್ಯಾಂಕ್‌ಗೆ ಸೆಕ್ಯೂರಿಟಿ ಇಟ್ಟಿದ್ದಾರೆ. ಅದನ್ನು ಬಿಡಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರಿಗೆ ಉದ್ಯೋಗ ಸಹಿತ ಇಲ್ಲ. ಎಲ್ಲೋ ಕೆಲವರಿಗೆ ಕೆ. ಎಸ್. ಆರ್. ಟಿ. ಸಿ. ಮತ್ತು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಸಿಕ್ಕಿದೆ. ಈಗ ಮೂರು ಕೋಟಿ ರೂಪಾಯಿಗಳನ್ನು ಅನಾವಶ್ಯಕವಾಗಿ ಬ್ಯಾಂಯ ರೂಪದಲ್ಲಿ ಕೊಡಬೇಕಾಗುತ್ತದೆ.

6–15 ಪಿ. ಎಂ.

ಆದ್ದರಿಂದ ಆದಷ್ಟು ಬೇಗ ಈ ಹಣ ವಾಪಸ್ ಕೊಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಗಮನಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ತಾವು ಮಾಡಿದ್ದ ನಿರ್ಣಯ ಸರಿ. ಆದರೆ ಈ ಮಾಕ್ಸಿಕ್ಯಾಬ್ ಡೆಫಿನೇಶನ್ ಕೆಳಗೆ ಕಾಂಟ್ರಾಕ್ಟ್ ಕ್ಯಾರೇಜನವರಿಗೆ ಆರು ಪ್ಲಸ್ ಒಂದು ಇಷ್ಟಕ್ಕೆ ಪರ್ಮಿಟ್ ಕೊಟ್ಟಿದ್ದರು. ಅದನ್ನು ತಾವು ಇವತ್ತು ಹನ್ನೆರಡು ಪ್ಲಸ್ ಒಂದು ಇವತ್ತೆ ಪರ್ಮಿಟ್ ಕೊಡಬೇಕೆಂದು ಇದನ್ನು ತಂದಿದ್ದೀರಿ. ಆದರೆ ಈ ಮ್ಯಾಕ್ಸಿ ಕ್ಯಾಬ್‌ಗಳಿಗೆ ಪರ್ಮಿಟ್ ಕೊಡತಕ್ಕಂಥಾದ್ದು ಸರಿಯಿಲ್ಲವೆನ್ನುವ ವಾದವನ್ನು ನಾನು ಮಾಡುತ್ತಿದ್ದೆ. ಕಳೆದ ಮೂರು ವರ್ಷಗಳಲ್ಲಿ ನಾನು ಸಾರಿಗೆ ಸಚಿವನಾಗಿರುವ ತನಕ ಕರ್ನಾಟಕ ರಾಜ್ಯದಲ್ಲಿ ಈ ಮ್ಯಾಕ್ಸಿ ಕ್ಯಾಬ್‌ಗಳಿಗೆ ಒಂದು ಪರ್ಮಿಟ್ ಸಹ ಮೂರು ವರ್ಷಗಳಲ್ಲಿ ಕೊಡಲಿಲ್ಲ ನಾನು ಇದನ್ನು ಕಂಪ್ಲೀಟ್ ಆಗಿ ಬ್ಯಾನ್ ಮಾಡಿಸಿದ್ದೆ. ಯಾವುದೇ ಕಾರಣಕ್ಕೂ ಕೊಡಬಾರದು ಎಂದು ನಿಲ್ಲಿಸಿದ್ದೆವು. ಇದರಿಂದ ನಮ್ಮ ಕೆ. ಎಸ್. ಆರ್. ಟಿ. ಸಿ. ರೆವಿನ್ಯೂಗೆ ಧಕ್ಕೆ ಬರುತ್ತದೆ. ಹಿಂದೆ ಕೊಟ್ಟಿರಬಹುದು. ಆದರೆ ನಾನು ಸಾರಿಗೆ ಸಲಾಹೆಯ ಜವಾಬ್ದಾರಿಯನ್ನು 1985 ನೇ ಇಸವಿಯಲ್ಲಿ ವಹಿಸಿಕೊಂಡ ಮೇಲೆ

ಸುಮಾರು ಮೂರು ಮೂರುವರೆ ವರ್ಷಗಳ ಕಾಲ ಒಂದು ಪರ್ಮಿಟ್ ಸಹ ಕೊಡಲಿಲ್ಲ. ಈ ಮ್ಯಾಕ್ಸಿ ಕ್ಯಾಬ್ ಗಳಿಗೆ ಪರ್ಮಿಟ್ ಕೊಡಿಸುವುದಕ್ಕಾಗಿ ಈ ಲಾಭಿಯವರು ನನ್ನ ಮೇಲೆ ಎಷ್ಟೇ ಒತ್ತಡ ತಂದರೂ ಸಹ ನಾನು ಅದಕ್ಕೆ ಮಣಿಯಲಿಲ್ಲ. ಕಾರಣವೇನೆಂದರೆ, ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ಕೆ. ಎಸ್. ಆರ್. ಟಿ. ಸಿ. ಡಿಪೋದಿಂದ ಸುತ್ತಮುತ್ತ ಸುಮಾರು 100-150 ಈ ಮ್ಯಾಕ್ಸಿ ಕ್ಯಾಬ್ ಇರುತ್ತವೆ. ಡಿಪೋದಿಂದ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ ಬಿಡುವ ಮುನ್ನ ಒಂದು ಮ್ಯಾಕ್ಸಿ ಕ್ಯಾಬ್ ಹೋಗಿರುತ್ತದೆ. ಆಮೇಲೆ ಒಂದು ಮ್ಯಾಕ್ಸಿ ಕ್ಯಾಬ್ ಹೊರಡುತ್ತದೆ. ಈ ರೀತಿ ನಮ್ಮ ಕೆ. ಎಸ್. ಆರ್. ಟಿ. ಸಿ. ಬಸ್ಸಿನ ಹಿಂದೆ ಮುಂದೆ ಇವು ಹೋಗುತ್ತವೆ ಅವರವರಲ್ಲಿ ಒಂದು ಅಂಡರ್ ಸ್ಟ್ಯಾಂಡಿಂಗ್ಸ್ ಇರುತ್ತದೆ. ಇದರಿಂದ ನಮ್ಮ ಕೆ. ಎಸ್. ಆರ್. ಟಿ. ಸಿ.ಗೆ ಬರುವ ರೆವಿನ್ಯೂ ಅವರು ನುಂಗಿ ಹಾಕುತ್ತಾರೆ. ಆದರೆ ಇವತ್ತಿನದಿವಸ ನಮ್ಮ ಪರಿಸ್ಥಿತಿ ಏನಾಗಿದೆ ? ಇದರ ಬಗ್ಗೆ ನಮ್ಮ ಸರ್ಕಾರದವರು ಏನು ಗಮನಹರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ ? ಕಳೆದ ಎರಡು ವರ್ಷಗಳಲ್ಲಿ ಕೆ. ಎಸ್. ಆರ್. ಟಿ. ಸಿ. ಪರಿಸ್ಥಿತಿ ಬಹಳ ಅಧೋಗತಿಗೆ ಇಳಿದಿದೆ. ನಾನು ಸರ್ಕಾರವನ್ನು ಟೀಕೆ ಮಾಡ ಬೇಕೆಂದು ಆಗಲಿ ಮಂತ್ರಿಗಳನ್ನು ಟೀಕೆ ಮಾಡಬೇಕೆನ್ನುವ ದೃಷ್ಟಿಯಿಂದ ಆಗಲಿ ಈ ಮಾತನ್ನು ಹೇಳುತ್ತಿಲ್ಲ. ತಾವು ದಯಮಾಡಿ ನೋಡಿ. ಈಗ ಕೆ. ಎಸ್. ಆರ್. ಟಿ. ಸಿ. ಯನ್ನು ಕೇಳುವವರು ಹೇಳುವವರು ಯಾರೂ ಇಲ್ಲ. ಈ ಸಂಸ್ಥೆಯ ಬಗ್ಗೆ ಜನ ಶಾಪ ಹಾಕುವಂತಹ ಪರಿಸ್ಥಿತಿ ಬಂದಿದೆ. ಕೇಂದ್ರ ಸರ್ಕಾರದ ಹೊಸ ಪಾಲಿಸಿ ಯಿಂದ ಸಾರಿಗೆ ಸಂಸ್ಥೆಯ ಕೆಲವು ಟ್ರಿಪ್‌ಗಳನ್ನು ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದರು. ಆಮೇಲೆ ನಿಮ್ಮ ಮೂಲಕ ಏನು ಹೇಳಿಸಿದರು ? ನಾವು 1300 ಬಸ್ಸುಗಳ ಟ್ರಿಪ್‌ಗಳನ್ನು ಕ್ಯಾನ್ಸಲ್ ಮಾಡಿದ್ದು ಈಗ ಮತ್ತೆ ಶುರು ಮಾಡುತ್ತೇವೆಂದು ಹೇಳಿಸಿದರು. ಮತ್ತೆ 900 ಬಸ್ಸುಗಳ ಟ್ರಿಪ್‌ಗಳನ್ನು ಶುರು ಮಾಡಿದ್ದೇವೆಂದು ಹೇಳಿದರು. ನಿನ್ನೆಯ ತನಕ ಒಂದು ಟ್ರಿಪ್ ಸಹ ಶುರು ಮಾಡಿಲ್ಲ. ನಿಮ್ಮನ್ನು ಸಹ ಅವರು ಫೂಲ್ ಮಾಡಿದ್ದಾರೆ. ಈ ಬಗ್ಗೆ ಎಲ್ಲಾ ಶಾಸಕರ ದೂರು ಇದೆ. ನಿಲ್ಲಿಸಿರುವ ಬಸ್ಸುಗಳನ್ನು ಮತ್ತೆ ಓಡಿಸಲು ಶುರು ಮಾಡಿಲ್ಲ. ಇಂತಹ ಪರಿಸ್ಥಿತಿ ಈ ಸಂಸ್ಥೆಗೆ ಬಂದಿದೆ. ಕೆ. ಎಸ್. ಆರ್. ಟಿ. ಸಿ. ಯಲ್ಲಿ ಎಫಿಷಿಯನ್ಸಿ ಇಂಪ್ರೂವ್ ಆಗಬೇಕು. ಅಲ್ಲಿ ಎಫಿಷಿಯನ್ಸಿ ಆಗತ್ಯ ಇದೆ. ತಾವೀಗ ಮತ್ತೆ ಮ್ಯಾಕ್ಸಿ ಕ್ಯಾಬ್‌ಗಳಿಗೆ ಹನ್ನೆರಡು ಪ್ಲಸ್ ಒಂದಕ್ಕೆ ಪರ್ಮಿಟ್ ಕೊಡುತ್ತಿದ್ದೀರಿ. ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ಅಲ್ಲಿ ಅನ್ನ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಬರುತ್ತದೆ. ಅಲ್ಲಿ ಸುಮಾರು 7-8 ವರ್ಷಗಳಿಂದ ಒಂದು ಮ್ಯಾಕ್ಸಿ ಕ್ಯಾಬ್‌ನಲ್ಲಿ 4 ಜನರು ಕೆಲಸ ಮಾಡುತ್ತಿದ್ದರು ಒಟ್ಟಾರೆ ಇದು 25 ಸಾವಿರ ಜನ ನಿರುದ್ಯೋಗಿಗಳು ಆಗುತ್ತಾರೆ.

ಕಳೆದ ಮೂರು ವರ್ಷಗಳಿಂದ ಕೆ. ಎಸ್. ಆರ್. ಟಿ. ಸಿ. ಯಲ್ಲಿ ಎಫಿಷಿಯನ್ಸಿ ಕಡಿಮೆ ಆಗಿರುವುದರಿಂದ ಅಲ್ಲಿನ ಅಡ್ಮಿನಿಸ್ಟ್ರೇಷನ್ ಸಹ ಹಾಳಾಗಿದೆ. ಅಲ್ಲಿ ಎಂ. ಡಿ. ಏನು ಮಾಡುತ್ತಿದ್ದಾರೆ ? ಅಲ್ಲಿರತಕ್ಕಂಥ ನೌಕರರು ಏನು ಮಾಡುತ್ತಿದ್ದಾರೆ ? ನಿಲ್ಲಿಸಿದ ಬಸ್ಸುಗಳನ್ನು ಶುರು ಮಾಡಿಲ್ಲ. ಅಲ್ಲಿನ ಪರಿಸ್ಥಿತಿ ಬಹಳ ರೋಜಿನಿಯ ವಾಗಿದೆ. ನನಗೆ ಕೆ. ಎಸ್. ಆರ್. ಟಿ. ಸಿ. ಬಗ್ಗೆ ಅಭಿಮಾನ ಇದೆ. ರಾಷ್ಟ್ರೀಕರಣದಲ್ಲಿ ನಂಬಿಕೆಯುಳ್ಳವನು ನಾನು. ನಾನು ಸಾಕಷ್ಟು ಪ್ರಯತ್ನ ಮಾಡಿ 4-5 ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಿದೆ. ನಮ್ಮ ಸುಭಾಷ್ ನಗರ ಬಸ್ ನಿಲ್ದಾಣದಲ್ಲಿ ರಾತ್ರಿ 9 ಗಂಟೆ ಮೇಲೆ ಸುಮಾರು ಮೂರು ವರ್ಷಗಳ ಕಾಲ ಒಂದು ಪ್ರೈವೇಟ್ ಬಸ್ ಸಹ ನಿಲ್ಲುತ್ತಿರಲಿಲ್ಲ ಆದರೆ ಕಳೆದ 2 ವರ್ಷಗಳಿಂದ ಈಚೆಗೆ ಅಲ್ಲಿ 200-300 ಪ್ರೈವೇಟ್ ಬಸ್ಸುಗಳು ನಿಲ್ಲುತ್ತವೆ. ತಾವು ಬೇಕಾದರೆ ತನಿಖೆ ಮಾಡಿ. ನಾನು ಇಲ್ಲಿ ಯಾರನ್ನೂ ದೂಷಣೆ ಮಾಡಬೇಕೆಂದು ಹೇಳು ತ್ತಿಲ್ಲ. ನಾನು ಬಾಯಲ್ಲಿ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿ ಇವತ್ತು ಏನಾಗಿದ ? ಇದರಿಂದ ನಮ್ಮ ಕೆ. ಎಸ್. ಆರ್. ಟಿ. ಸಿ. ಗೆ ಬರತಕ್ಕಂಥ ರೆವಿನ್ಯೂ ಎಲ್ಲಾ ಪ್ರೈವೇಟ್ ಬಸ್ ಮಾಲೀಕರು ನುಂಗಿ ಹಾಕುತ್ತಿದ್ದಾರೆ. ಇದರಲ್ಲಿ ಏನೂ ಸಂಶಯ ಇಲ್ಲ. ಇಷ್ಟು ಹೇಳುತ್ತಾ ನಮ್ಮ ಕಾಲದಲ್ಲಿ ಪ್ರೈವೇಟ್ ಬಸ್ಸು ಮಾಲೀಕರು ಅಲ್ಲಿ ಆಫೀಸ್‌ಗಳನ್ನು ಓಪನ್ ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಆದರೆ ಮಾಜಿ ಹಣಕಾಸಿನ ಮಂತ್ರಿಗಳು ಅಲ್ಲಿಗೆ ಹೋಗಿ ಪ್ರೈವೇಟ್ ಬಸ್ಸು ಮಾಲೀಕರ ಒಂದು ಆಫೀಸ್ ಓಪನ್ ಮಾಡುವುದಕ್ಕೆ ಹೋಗಿದ್ದರು. ತಾವು ಏನು ಮಾಡುತ್ತೀರಿ ? ಬಸ್ಸು ಮಾಲೀಕರು ಅಲ್ಲಿ ಬಸ್ಸು ನಿಲ್ಲಿಸಬೇಡಿ ಎಂದರೆ ಅವರು ಕೇಳುತ್ತಾರೆಯೇ ? **Every day you are loosing about Rs. 20-25 lakhs at Subhashnagar bus station itself.** ಬಿಜಾಪುರ ಡಿವಿಜನ್ ಬೆಳಗಾಂ ಡಿವಿಜನ್ ಧಾರವಾಡ ಡಿವಿಜನ್ ಮತ್ತು ಬೆಂಗಳೂರು ರೂರಲ್ ಡಿವಿಜನ್‌ಗಳಲ್ಲಿ ಯಾವ ವರ್ಷದಲ್ಲಿಯೂ ಲಾಸ್ ಆಗಿಲ್ಲ. ಈ ವರ್ಷ ಲಾಸ್ ಆಗುತ್ತಿದೆ. ತಾವು ಹೇಳ್ಬಹುದು ಡೀಜಲ್ ಬೆಲೆ ಜಾಸ್ತಿ ಮಾಡಿದ್ದಾರೆ ಎಂದು. ಈ ಒಂದು ಡಿವಿಜನ್‌ಗಳಲ್ಲಿ ಸುಮಾರು 80 ಕೋಟಿ ಲಾಸ್ ಆಗುತ್ತದೆ. ಪ್ರತಿಯೊಂದು ಡಿವಿಜನ್‌ನಲ್ಲಿ ಸುಮಾರು 20-25 ಕೋಟಿ ರೂಪಾಯಿಗಳಷ್ಟು ಲಾಸ್ ಆಗುತ್ತದೆ. ತಾವು ಬೇಕಾದರೆ ತಮ್ಮ ಎಂ. ಡಿ. ಯವರನ್ನು ಕೇಳಿ ಈ ವರ್ಷ ಸುಮಾರು 100 ಕೋಟಿ ರೂಪಾಯಿಗಳಷ್ಟು ಲಾಸ್ ಆಗುತ್ತದೆ. ನೀವು ಏಪ್ರಿಲ್‌ನ ಲೆಕ್ಕಾಚಾರವನ್ನು ನೋಡಿ. ಪ್ರತಿದಿವಸ ಎಷ್ಟು ಕಲೆಕ್ಷನ್ ಆಗುತ್ತಿದೆಯೆಂದು ನನಗೆ ಗೊತ್ತಾಗುತ್ತಿದೆ. ನೀವು ದಯವಿಟ್ಟು ಆ್ಯಸ್ ಚೀಫ್ ಮಿನಿಸ್ಟರ್, ಕೆ. ಎಸ್. ಆರ್. ಟಿ. ಸಿ. ಯನ್ನು ರಿವ್ಯೂ ಮಾಡಿ. ಗೊತ್ತಾಗುತ್ತದೆ. ನಿವ ಗೆ ನಾನು ಸಲಹೆ ಕೊಡುತ್ತೇನೆ. ಸುಮಾರು 42 ಲಕ್ಷ ಜನ ಪ್ರತಿ ದಿನ ಕೆ. ಎಸ್. ಆರ್. ಟಿ. ಸಿ. ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಾರೆ. ನನಗೆ

ಪ್ರಚಾರ ಸಿಗಬೇಕು ಕ್ರೆಡಿಟ್ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದಾಗಿ ನಾನು ಹೇಳುತ್ತಿದ್ದೇನೆ. ನಾನು ಕೊನೆಯದಾಗಿ ಹೇಳುವುದೇನೆಂದರೆ, ಈ ಸಂದರ್ಭವನ್ನು ಉಪಯೋಗಿಸಿಕೊಂಡು ನಾನು ಹೇಳುವುದಿಷ್ಟೇ. ಮ್ಯಾಕ್ಸಿ ಕ್ಯಾಬ್ ಬಗ್ಗೆ ಏನು ಅಮೆಂಡ್‌ಮೆಂಟ್ ತಂದಿದ್ದೀರಿ ಅದು ಸರಿ. ನೀವು ಮಾಡಿರತಕ್ಕಂಥಾದ್ದರಲ್ಲಿ ಅನುಕೂಲವಾಗುತ್ತದೆ. ಆದರೆ, ಒಂದು ಸಲಹೆಯನ್ನು ನಾನು ಕೊಡುತ್ತೇನೆ. ಇನ್‌ಸಿಡೆಂಟಲ್ ಆಗಿ ನೀವು ಪರ್ಮಿಟ್‌ಗಳನ್ನು ಕೊಡುವುದಕ್ಕೆ ಹೋಗಬೇಡಿ. ನೀವು ಪರ್ಮಿಟ್‌ಗಳನ್ನು ಕೊಡುವುದಾದಲ್ಲಿ ಕೆ. ಎಸ್. ಆರ್. ಟಿ. ಸಿ.ಯನ್ನು ಇನ್ನು ಒಂದು ವರ್ಷದಲ್ಲೋ ಅಥವಾ ಎರಡು ವರ್ಷದಲ್ಲೋ ಮುಚ್ಚಬೇಕಾಗುತ್ತದೆ. 5 ನೂರು ಸಾವಿರ ಕೋಟಿ ರೂಪಾಯಿ ಬಂಡವಾಳ ಇರತಕ್ಕಂಥ, 52 ಲಕ್ಷ ಜನ ಕಾರ್ಮಿಕರು ಇರತಕ್ಕಂಥ ಈ ಸಂಸ್ಥೆಗೆ ನಾವು ಬಾಗಿಲು ಹಾಕತಕ್ಕಂಥ ಕಾಲ ಬರಬಾರದು ಅನ್ನತಕ್ಕಂತಾದ್ದು ಬಹುಶಃ ನಿಮ್ಮ ಇಚ್ಛೆಯು ಇದೇ ಇದೆ. ನನ್ನ ಇಚ್ಛೆಯೂ ಇದ್ದೇ ಇದೆ. ಆದರೆ, ಅದಕ್ಕೆ ಮೂಲಭೂತವಾಗಿ ಮ್ಯಾಕ್ಸಿಕ್ಯಾಬ್‌ನವರು ಏನು ಮಾಡುತ್ತಾರೆಂದರೆ, ಮೆನ್ಯುಫ್ಯಾಕ್ಚರ್ ಕಂಪನಿಯವರು ಬಂದು ನಮಗೆ ಎಲ್ಲಾ ತರದ ಟಿಂಮ್ಪೇಷನ್, ಪ್ರೆಷರ್, ಮತ್ತೊಂದು ಮಾಡುತ್ತಾರೆ; ಪರ್ಮಿಟ್‌ಗಳನ್ನು ತೆಗೆದುಕೊಂಡು ಹೋಗುತ್ತಾರೆ. ಇದರಿಂದ ಪ್ಯಾಸೆಂಜರ್ಸ್‌ಗೆ ಅನಾನುಕೂಲವಾಗುತ್ತದೆ. ಕೆ.ಎಸ್.ಆರ್.ಟಿ.ಸಿ. ಮುಳುಗಿಹೋಗುತ್ತದೆ. ಈಗಿರತಕ್ಕಂಥ ಮ್ಯಾಕ್ಸಿಕ್ಯಾಬ್‌ಗಳಲ್ಲಿ ಆಕ್ಯುಪೈಯಲ್ ಆಗಿ 20–22 ಜನ ಹೋಗುತ್ತಿದ್ದಾರೆ. ಹತ್ತು ಪ್ಲಸ್ 1 ಕ್ಕೆ ಪರ್ಮಿಷನ್ ಕೊಟ್ಟು ಅವರು ಹೋಗುವುದನ್ನು ಲೀಗಲೈಸ್ ನೂಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಮಾಡಬೇಕೆಂದಿದ್ದೆ. ಇದನ್ನು ನೀವು ಮಾಡುತ್ತೀರಿ. ನಾನು ವೆಲ್‌ಕಂ ಮಾಡುತ್ತೇನೆ. ಆದರೆ ಪರ್ಮಿಟ್‌ಗಳನ್ನು ಕೊಡತಕ್ಕಂತಾದ್ದಕ್ಕೆ ನೀವು ಏನಾದರೂ ಕೈ ಹಾಕಿದರೆ ಕೆ. ಎಸ್. ಆರ್. ಟಿ. ಸಿ. ಮುಳುಗಿಹೋಗುತ್ತದೆ ಎನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ :– ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಈ ಮ್ಯಾಕ್ಸಿಕ್ಯಾಬ್ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇದನ್ನು ಪೀಠಿಕೆ ಇಲ್ಲದಂಥ ರೀತಿಯಲ್ಲಿ ಉಪಯೋಗಿಸಿದರೆ ಈಗ ನಾವು ಏನು ಕೆ. ಎಸ್. ಆರ್. ಟಿ. ಸಿ. ನಷ್ಟದಲ್ಲಿದೆ ಎಂಬ ಮಾತನ್ನು ಹೇಳುತ್ತಿದ್ದೇವೆಯೋ, ಶೇಡಕ 10 ರಷ್ಟು ಹಣವನ್ನು ಹೆಚ್ಚಿಗೆ ಮಾಡಬೇಕೆಂದು ಏನು ಹೇಳುತ್ತೇವೆ, ಶೇಕಡ 10 ಅಲ್ಲ ಶೇಕಡ 20 ರಷ್ಟು ಹೆಚ್ಚಿಗೆ ಮಾಡಿದರೂ ಸಹಾ ಶಾಶ್ವತವಾಗಿ ನಷ್ಟದಲ್ಲಿ ಉಳಿಯುವುದಕ್ಕೆ ನಾವು ಸಹಾಯ ಮಾಡಿದ ಹಾಗಾಗುತ್ತದೆ. ಒಂದು ಕಡೆ ಮ್ಯಾಕ್ಸಿಕ್ಯಾಬ್‌ಗಳಿಗೆ ಪರ್ಮಿಟ್‌ಗಳನ್ನು ಕೊಡುವುದು ಮತ್ತೊಂದು ಕಡೆ ಲುಕ್ರಾನಾಗುತ್ತದೆ ಎಂದು ಹೇಳಿ ಪ್ರನಃ ಬಸ್ ದರವನ್ನು ಹೆಚ್ಚಿಸುವುದಿದೆಯಲ್ಲಾ ಇದು ನಿಜವಾಗಲೂ ಸರಿಯಾದಂಥ ರೀತಿಯಲ್ಲ. ಇನ್ನೂ ಒಂದು ಸನ್ಮಾನ್ಯ ಅಧ್ಯಕ್ಷಣೀಯವರೇ, ಕಾನೂನು ಮಾಡಿದರೂ ಸಹಾ ತಿರುಚಿ ಮಾಡುವುದರಲ್ಲಿ ನಾವು ಬಹಳ ಪ್ರವೀಣರು. ಏನು ಇವತ್ತಿನದಿವಸ ತಿದ್ದುಪಡಿ ತಂದಿದ್ದಾರೆ. ಈ ತಿದ್ದುಪಡಿಯಲ್ಲಿ ಅವರು ಕಾರಣಗಳನ್ನು ಹೇಳುತ್ತಾ ಒಂದು ಮಾತನ್ನು ಹೇಳುತ್ತಾರೆ. ಇಂಡಿಯನ್ ಬ್ಯಾಂಕರ್ ಅಸೋಸಿಯೇಷನ್ ಮತ್ತು ಕೇಂದ್ರ ಸರ್ಕಾರ ವಿಪಾರಸ್ ಮಾಡಿದಂಥ ರೀತಿಯಲ್ಲಿ ನಾವು ಇವತ್ತು ಶೇಕಡ 6 ರಿಂದ 12 ರಷ್ಟು ಬಡ್ಡಿಯನ್ನು ಹೆಚ್ಚು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಯಾರಿಗೆ ಸನ್ಮಾನ್ಯ ಅಧ್ಯಕ್ಷಣೀಯವರೇ ಹೆಚ್ಚು ಮಾಡುವುದು ? ಇವರು ಉದ್ದೇಶದಲ್ಲಿ ಹೇಳುವುದೊಂದು, ಕಾರಣ ಹೇಳುವುದೊಂದು, ಆದರೆ ಕಾನೂನಿನಲ್ಲಿ ತಾವು ಏನು ಹೇಳುತ್ತೀರಿ ಸ್ವಾಮಿ ? ತಾವು ಏನಾದರೂ ಬ್ಯಾಂಕ್‌ನಲ್ಲಿ, ಯಾರು ಸಾಲವನ್ನು ಪಡೆದಿದ್ದಾರೆ, ಯಾರು ಸೆಕ್ಯೂರ್ಡ್ ಎಂದು ಹೇಳುತ್ತೀರಿ ಅಂಥವರಿಗೆ ಮಾತ್ರ ಶೇಕಡಾ 12 ರಷ್ಟು ಬಡ್ಡಿಯನ್ನು ಕೊಡುತ್ತೀರಿ. ಏತಕ್ಕೆ ಈ ಮೋಸವನ್ನು ಮಾಡುತ್ತೀರಿ ? ತಾವು ಹೇಳುವವರು ಗುರಿ ಮತ್ತು ಉದ್ದೇಶದಲ್ಲಿ ಏನು ಹೇಳುತ್ತೀರಿ ? ಇಂಡಿಯನ್ ಬ್ಯಾಂಕರ್ ಅಸೋಸಿಯೇಷನ್‌ನವರು ಈ ಬ್ಯಾಂಕ್‌ನಲ್ಲಿ ಶೇಕಡಾ 6 ರಷ್ಟು ಹಣವನ್ನು ಕೊಡುವುದರ ಮುಖಾಂತರ ನಷ್ಟವಾಗುತ್ತದೆ. ಇದನ್ನು ಸರಿಪಡಿಸಲಿಕ್ಕೆ ಎಂಬ ಮಾತನ್ನು ಅವರು ಹೇಳಿದರೆ ತಾವು ಏತಕ್ಕೋಸ್ಕರ, ಅವರಿಗೋಸ್ಕರ, ಇದನ್ನು ಮಿಸಲಾಗಿ ಮಾಜಿಲ್ಲ ? ಆದರೆ ತಮ್ಮ ಕಾನೂನು ಏನಿದೆ ? ಸಕ್ಷನ್ 11 ರಲ್ಲಿ ತಾವು ಏನು ಹೇಳಿದ್ದೀರಿ ಸ್ವಾಮಿ ? **It is never confined to the Bankers. It is applicable to all secured creditors.**

Sri. M. Veerappa Moily : How can we discriminate ?

ಶ್ರೀ ಹೆಚ್. ಏಕಾಂತಯ್ಯ :– ಇವತ್ತು ಫೈನಾನ್ಸ್‌ನವರಿಂದ 2 ರೂಪಾಯಿಗೆ ಬಡ್ಡಿ ತೆಗೆದುಕೊಂಡಿದ್ದರೆ ಅಥವಾ ಒಂದೂವರೆ ರೂಪಾಯಿಗೆ ತೆಗೆದುಕೊಂಡಿದ್ದರೆ. ಅವನಿಗೆ ತಾವು ಏನು 6 ರೂಪಾಯಿ ಬಡ್ಡಿ ಎಂದು ಹಿಂದೆ ಲೆಕ್ಕಾಚಾರ ಹಾಕಿ ಕೊಟ್ಟಿದ್ದೀರಿ. ಅವರಿಗೂ ಇದನ್ನು ಕೊಡಬೇಕಾಗುತ್ತದೆ. ಅವರಿಗೂ ಈ ಕಾನೂನು ತಿದ್ದುಪಡಿಯಿಂದ ಕೊಡಬೇಕಾಗುತ್ತದೆ. ಕೇವಲ ಬ್ಯಾಂಕ್‌ನವರಿಗೆ ಎಂಬ ಮಾತನ್ನು ತಾವು ಏತಕ್ಕೋಸ್ಕರ ಹೇಳುತ್ತೀರಿ ? **Secured creditors,** ಅಂದರೆ ಯಾರು ಖಾಸಗಿ ಬಂಡವಾಳಗಾರರು

ಹಣವನ್ನು ಪಾಕಿದ್ದಾರೋ ಆ ಬಂಡವಾಳಗಾರರಿಗೆ, ಯಾರು ಫೈನಾನ್ಸ್‌ನವರ ಮುಖಾಂತರ ಹಣವನ್ನು ತೆಗೆದುಕೊಂಡಿದ್ದಾರೋ ಅವರಿಗೆ ಪರೋಕ್ಷವಾಗಿ ಸಹಾಯ ಮಾಡಬೇಕೆನ್ನುವ ದುರುದ್ದೇಶದಿಂದ ಈ ಕಾನೂನನ್ನು ತಂದಿದ್ದೀರಿ. ಕೇವಲ ಸಾರ್ವಜನಿಕ ಸಂಸ್ಥೆಗಳಾದಂಥ ಬ್ಯಾಂಕುಗಳಿಗೆ ಮಾತ್ರ ಎಂದಲ್ಲ. ಬ್ಯಾಂಕುಗಳಿಂದ ತೆಗೆದುಕೊಂಡ ಹಣಕ್ಕೆ ಮಾತ್ರ ಶೇಕಡಾ 12 ರಷ್ಟು ಬಡ್ಡಿ ಕೊಡುವುದಾದರೆ ಅದು ಬೇರೆ ಪ್ರಶ್ನೆ. ಆದರೆ ಅದರ ಜೊತೆಯಲ್ಲಿಯೇ. ಯಾರು ಬೇರೆ ಬೇರೆ ಸಂಸ್ಥೆಗಳಿಂದ ಅಂದರೆ ಖಾಸಗಿ ಸಂಸ್ಥೆಗಳಿಂದ, ಫೈನಾನ್ಸ್‌ರ್ ಎಂದು ಏನು ಹೇಳುತ್ತಾರೆ ಅವರಿಂದ ಹಣವನ್ನು ತಂದಿದ್ದರೂ ಸಹಾ ಅವರಿಗೂ ಶೇಕಡಾ 12 ರಷ್ಟು ಬಡ್ಡಿ ಕೊಡುವಂಥ ವ್ಯವಸ್ಥೆಯನ್ನು ಈ ತಿದ್ದುಪಡಿಯಲ್ಲಿ ತಾವು ತಂದಿದ್ದೀರಿ. ಏಕೆ ? ಇದಕ್ಕೆ ಏನ ಪಟ್ಟಭದ್ರ ಹಿತಾಸಕ್ತಿಗಳು ಇವೆ.

Sri. M. Veerappa Moily : How can we discriminate ?

ಶ್ರೀ ಹೆಚ್. ಏಕಾಂತಯ್ಯ :– ಇಲ್ಲಿಯವರೆಗೆ ತಾವು ಹೇಳಿದ್ದೇ ಆಗಲಿ ಅಥವಾ ಮಂತ್ರಿಗಳು ಹೇಳಿದ್ದೇ ಆಗಲೀ ಈ ಮಾತನ್ನು ಹೇಳಲಿಲ್ಲ. ನಾವು ಹೇಳಿದ ಮೇಲೆ ಹೇಳುತ್ತಿದ್ದೀರಿ, ಹೇಳಿ. ಏನು ಹೇಳುತ್ತೀರಿ, ಎಂಬುದನ್ನು ಹೇಳುತ್ತೇನೆ. ಸ್ವಲ್ಪ ದಯವಿಟ್ಟು ಓದಿ, ತಾವು ಓದಿದ್ದೀರಿ, ಆದರೆ ನಾವು ಓದಿಲ್ಲ ಎಂಬ ಭಾವನೆ ಬೇಡ; ಉತ್ತರ ಕೊಡುವುದಕ್ಕೋಸ್ಕರವಾಗಿ ಹೇಳುತ್ತೇನೆ, ತಾವು ಪೇಜ್ ಐದರಲ್ಲಿ ಏನು ಹೇಳಿದ್ದೀರಿ. **"In view of the request made by the Indian Bankers' Association and the suggestion made by the Government of India, Ministry of Home Affairs, it is proposed to enhance the rate of interest from 6% to 12% on the amounts due to the Banks from the ex-contract carriage operators."** ಏನು ಇದೆ ? ಕೇವಲ ಬ್ಯಾಂಕ್‌ನವರಿಗೆ ಸಾಲ ಕೊಡಬೇಕಾಗಿತ್ತು, ಆ ಹಣ ಕೊಡಬೇಕು. ಆ ಹಣಕ್ಕೆ ಮಾತ್ರ ಉದ್ದೇಶ ಇದೆ ಎಂಬ ಮಾತನ್ನು ತಾವು ತಮ್ಮ ಎಕ್ಸ್‌ಪ್ಲನೇಟರಿ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೀರಿ. ಆದರೆ ತಾವು ಕಾನೂನಿನಲ್ಲಿ ಏನು ಹೇಳುತ್ತೀರಿ ?... **It is not only confined to the amounts due to the Banks, but it is applicable to all secured creditors, who have advanced loans on the hypothecation of these vehicles.**

ಯಾಕೆ ಸ್ವಾಮಿ ಇಂತಹ ಮೋಸ ಮಾಡುತ್ತೀರಿ ? ನಾನು ಕೇಳುತ್ತಿದ್ದೇನೆ,. ಈ ಹಣವನ್ನು ನೀವು ಆರರಿಂದ 12 ಪರ್ಸೆಂಟ್ ಇವ್ವೆತ್ತು ಕೊಡುತ್ತೇವೆಂದು ಹೇಳುತ್ತೀರಿ. 1971 ನೇ ಇಸವಿಯಲ್ಲಿ ತಾವು ಇದನ್ನು ಸ್ವಾಧೀನ ಪಡಿಸಿಕೊಂಡಿದ್ದೀರಿ. 10 ವರ್ಷ ಆದ ಮೇಲೆ ಖಾಸಗೀ ಫೈನಾನ್ಸಿಯರ್ಸ್‌ಗಳು ಯಾರು ಇದ್ದಾರೆ, ಅವರಿಗೆ ಲಾಭ ಮಾಡಬೇಕು ಎಂಬ ದುರುದ್ದೇಶದಿಂದ ಈ ಕಾನೂನನ್ನು ತಂದಿದ್ದೀರಿ. ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವಕ್ಕೆ ಒಳಗಾಗಿ ತಂದಿದ್ದೀರಿ. ಕೇವಲ ಬ್ಯಾಂಕ್‌ನ ಹಣ ಕೊಡುವುದಕ್ಕೆ ಅಲ್ಲ. ಆದರ ಜೊತೆಗೆ ಪ್ರೈವೇಟ್ ಫೈನಾನ್ಸಿಯರ್ಸ್ ಯಾರು ಇದ್ದಾರೆ ಅವರಿಗೆ ಹಣ ಕೊಡುವುದಕ್ಕೆ ಈ ಕಾನೂನನ್ನು ತಂದಿದ್ದೀರಿ. ಖಂಡಿತವಾಗಿ ಇದು ಸರಿಯಾದ ರೀತಿಯು ಆಲ್ಲ. 1971 ನೇ ಇಸವಿಯಲ್ಲಿ ಕಂಟ್ರಾಕ್ಟ್ ಕ್ಯಾರಿಯೇಜಸ್ ಆಕ್ಟ್ ಪ್ರಕಾರ ತಾವು ಸ್ವಾಧೀನ ಪಡಿಸಿಕೊಂಡ ಈ ಬಸ್‌ಗಳನ್ನು 1990 ನೇ ಇಸವಿಯಲ್ಲಿ ಬಡ್ಡಿಯನ್ನು ಹೆಚ್ಚಳ ಮಾಡುವ ಪ್ರವೃತ್ತಿ ಏನು ಇದೆ, ಇದು ನಿಜವಾದ ಕಾರಣವನ್ನು ಈ ದೇಶದ ಜನರಿಗೆ ತಾವು ಹೇಳಬೇಕಾಗುತ್ತದೆ. ಹೇಳದೇ ಹೋದಾಗ ತಾವು ಹೇಳಿರುವಂತಹ ಉದ್ದೇಶ ಮತ್ತು ಕಾರಣಗಳನ್ನು ಪರಿಶೀಲನೆ ಮಾಡಿದಾಗ ಇದು ಕೇವಲ ಅವರ ಹೆಸರಿನಲ್ಲಿ ಬಂಡವಾಳಗಾರರಿಗೆ ಹೆಚ್ಚು ಹಣವನ್ನು ಕೊಡುವಂತಹ ಕೆಲಸ ಮಾಡಿದ್ದೀರಿ. ಇದು ದೇಶಕ್ಕೆ ಮಾಡಿದಂತಹ ದ್ರೋಹ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸ್ವಲ್ಪ ತಾವು ಯೇಲ್ಸ್ ಆಗುವುದಾದರೆ ಹೇಳುತ್ತೇನೆ. ನಾನೇನೋ ಬಹಳ ಗಾಭರಿ ಆಗಿಬಿಟ್ಟೆ. ಏಕೆಂದರೆ ಅನಾಹುತ ಆಗುತ್ತಿದೆ ಎಂದು. ತಾವು ಯಾವುದನ್ನು ಓದುತ್ತಿದ್ದೀರಿ ಎಂದರೆ.....

ಶ್ರೀ ಹೆಚ್. ಏಕಾಂತಯ್ಯ :– ತಾವು ಏನು ಪ್ರಿಂಟ್ ಮಾಡಿದ್ದೀರೋ ಅದನ್ನು ಓದುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ತಾವು ಯಾವುದನ್ನು ಓದುತ್ತಿದ್ದೀರಿ ಎಂದರೆ **"Extract from the Karnataka Contract Carriage (Acquisition) Act, 1976"** ಅದರಲ್ಲಿರುವಂತಹದು ಸೆಕ್ಯೂರ್ಡ್ ಕ್ರೆಡಿಟರ್ಸ್ ಎಂದು ಇದೆ. ಅದರಲ್ಲಿ ಬ್ಯಾಂಕ್‌ನವರಿಗೆ ಎಂದು ಇಲ್ಲ. ಯಾವುದೂ ಇಲ್ಲ. **Bankers or anybody else,** ಈಗ ಕೊಶ್ಚನ್ ಬಂದಿದ್ದು ಬ್ಯಾಂಕರ್ಸ್ ಬಗ್ಗೆ. ಇದರಲ್ಲಿ ನಾವು ಅಮೆಂಡ್‌ಮೆಂಟ್ ತೀಳಕ್ಕಿದ್ದು, **about interest rates to be enhanced.**

"In Section 11 of the principal Act, in sub section (4) for the words 'Six per cent' the words 'twelve per cent', shall be and shall be deemed always to have been substituted".

ನಾವು ಏನು ಇನ್ಸರ್ಟ್ ಮಾಡಿದ್ದೇವೆ. This has been done on the representation of Bankers' Association. ಫೈನಾನ್ಸಿಯರ್ಸ್‌ಗೆ ಹಣ ಕೊಡುವುದಕ್ಕೆ ಮಾಡುತ್ತಿದ್ದೇವೆಯೇ ? ನಮ್ಮ ಅಮೆಂಡ್‌ಮೆಂಟ್‌ನಲ್ಲಿ ಇಲ್ಲ. ಸ್ವಲ್ಪ ತಾವು ತಾಳ್ಮೆಯಿಂದ ನಾವು ಹೇಳುವುದನ್ನು ಕೇಳಿ. ಫೈನಾನ್ಸಿಯರ್ಸ್‌ಗೆ ಕೊಡುತ್ತೇವೆ, ವೆಸ್ಟೆಡ್ ಇಂಟರೆಸ್ಟ್‌ಗೆ ಕೊಡುತ್ತೇವೆ ಅದರ್‌ವೈಸ್ ಬ್ಯಾಂಕರ್ಸ್‌ಗೆ ಕೊಡುತ್ತೇವೆ, ಅಮೆಂಡ್‌ಮೆಂಟ್‌ನಲ್ಲಿ ಎಲ್ಲಿದೆ ಹೇಳಿ ? ತಾವು ಏನು ಮಾಡುತ್ತಿದ್ದೀರಿ ಎಂದರೆ 1976 ರ ಎಕ್ಸ್‌ಟ್ರಾಕ್ಟ್ ಏನು ನಾವು ಕೊಟ್ಟಿದ್ದೇವೆ ಅದನ್ನು ಓದುತ್ತಿದ್ದೀರಿ. ಅದರಲ್ಲಿ ಏನು ಇದೆ ? ಸೆಕ್ಯೂರ್ಡ್ ಕ್ರೆಡಿಟರ್ಸ್ ಎಂದು ಇದೆ. ಸೆಕ್ಯೂರ್ಡ್ ಕ್ರೆಡಿಟರ್ಸ್, ಅಥವಾ ಬ್ಯಾಂಕರ್ಸ್ ಎಂದು ಇರುವಂಥಾದ್ದು 1976 ರ ಆಕ್ಟ್‌ನಲ್ಲಿ ನಾವು ಹೊಸದಾಗಿ ಏನೂ ಸೇರಿಸುತ್ತಿಲ್ಲ. ನಾವು ಹೊಸದಾಗಿ ಏನೋ ಸೇರಿಸಿ ಮಾರ್ವಾಡಿಗಳಿಗೆ ಹಣ ಕೊಡುವುದಕ್ಕೆ ಇದೆಯೇ ಎಂದು ನಾನು ನೋಡಿದರೆ ಇದರಲ್ಲಿ ಅಂತಹದು ಏನೂ ಇಲ್ಲ. **Perhaps, one thing I must appreciate that there is a fertile imagination with you and that imagination is not relevant to the discussion and deliberations on this Bill.**

ಶ್ರೀ ಹೆಚ್. ಏಕಾಂತಯ್ಯ :– ಮೊಯಿಲಿಯವರು ಇದಕ್ಕೆ ಸುಪ್ರಸಿದ್ಧರು.....
ನಾನು ತಮಗೆ ಕೇಳುತ್ತೇನೆ.....

Shri M. Veerappa Moily : To-day I surrender to you. ನಿಮ್ಮ ಪರ್ಸನಲ್ ಇಮಾಜಿನೇಷನ್‌ಗೆ ನನ್ನದು ಏನೂ ಸರಿ ಇಲ್ಲ...

ಶ್ರೀ ಹೆಚ್. ಏಕಾಂತಯ್ಯ :– ಬಹಳ ಸಂತೋಷ. ನಿಮಗೆ ಒಂದು ವಿಷಯ ಅರ್ಥ ಆಗಿದೆ..... ಸೆಕ್ಯೂರ್ಡ್ ಕ್ರೆಡಿಟರ್ಸ್ ಎಂದರೆ ಏನು ? ...

ದಯಮಾಡಿ ತಾವುಗಳು ಇಲ್ಲಿರುವುದನ್ನು ಓದಿ ಹೇಳಬೇಡಿ. ಅದನ್ನು ಬೇಕಾದರೆ ನಾನು ಕೂಡ ಓದುತ್ತೇನೆ. ಆದರೆ ಅದಕ್ಕಿಂತ ಹೆಚ್ಚಾಗಿ 1976 ನೇ ಇಸವಿಯಿಂದ ತಂದ ಕಾನೂನು ಏನಿದೆ. ಆ ಕಾನೂನಿನ ಅಡಿಯಲ್ಲಿ ಸೆಕ್ಯೂರ್ಡ್ ಕ್ರೆಡಿಟರ್ಸ್, ಅಂದರೆ ಕೇವಲ ಬ್ಯಾಂಕರ್ಸ್ ಮಾತ್ರ ಎಂಬ ಭಾವನೆ ತಮ್ಮಲ್ಲಿ ಇದೆ. **That is exactly what I wanted to tell...** ತಾವುಗಳು ಕೊಟ್ಟಿದ್ದೀರಲ್ಲಾ ? ಇಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಫೀಸರ್ಸ್ ಆಥವಾ ಬೇರೆ ಬೇರೆ ಯಾರನ್ನು ತಾವುಗಳು ಅಪ್ಪಾಯಿಂಟ್ ಮಾಡಿದ್ದೀರಲ್ಲ ? ಆ ಬಗ್ಗೆ ಹೇಳುವುದು ಇದ್ದರೂ ಅದನ್ನು ಮುಂದೆ ಸಂದರ್ಭ ಬಂದಾಗ ಹೇಳುತ್ತೇನೆ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.....

ಶ್ರೀ ಎಂ. ವೀರಪ್ಪ ಮೊಯಿಲಿ :– ತಾವುಗಳು 1976 ನೇ ಇಸವಿಯ ಚರಿತ್ರೆ ಹೇಳುತ್ತಾ ಹೋದರೆ ಹೇಗೆ ? ಹಾಗೆ ಹೇಳಬೇಕೆಂದರೆ ಎಲ್ಲಾ ಚರಿತ್ರೆಗಳನ್ನು ನಾವು ಹೇಳಬಹುದು. ಆದರೆ ಇವೊತ್ತಿನ ದಿವಸ ಈ ತಿದ್ದುಪಡಿಯಲ್ಲಿ ಏನಿದೆ ? ಅದಕ್ಕೆ ಸಂಬಂಧಪಟ್ಟಂತೆ ಏನಾದರೂ ಮೋಟಿವ್ಸ್ ಇದ್ದರೆ, ಏನಾದರೂ ಮಾಲಾಫೈಡ್ ಇದ್ದರೆ ಅದನ್ನು ದಯಮಾಡಿ ತಾವುಗಳು ಹೇಳಬಹುದು. **You are speaking on a particular Section of the Act, provisions of the Act of 1976 and you attribute motive on us to-day...** ಅದನ್ನು ಬಿಟ್ಟು ತಾವುಗಳು ಈಗ ಏನು ಹೇಳುತ್ತಾ ಇದ್ದೀರಿ ಅದು ನಮಗೆ ಅರ್ಥವಾಗುತ್ತಾ ಇಲ್ಲ.....

ಶ್ರೀ ಹೆಚ್. ಏಕಾಂತಯ್ಯ :– ನಿಮಗೆ ಅರ್ಥಮಾಡಿ ಹೇಳುವಷ್ಟು ಬುದ್ಧಿಮಂತಿಕೆ ನಮ್ಮಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ತಾವುಗಳು ಪೇಜ್ 5 ರಲ್ಲಿನ ವಿಚಾರಗಳನ್ನು ಓದಿದ್ದೀರಿ.

"Explanatory statement as required by the Rules 79 of the Rule of procedure and conduct of Business in the Karnataka Legislative Assembly" ಸಾಕಾ ? ಅದನ್ನು ತಾವುಗಳು ಸ್ವಲ್ಪ ಓದಿ. ಅದೇ ರೀತಿಯಲ್ಲಿ ಎರಡನೇ ಪ್ಯಾರಾದಲ್ಲಿ ಏನು ಹೇಳುತ್ತೀರಿ ?

In view of the request made by the Indian Bankers' Association and the suggestions made by the Government of India, Ministry of Home Affairs, it is proposed to enhance the rate of interest from Six percent to

Twelve percent on the amounts due to the Banks from the Ex-contract carriage operators.

ಇದರಲ್ಲಿ ನಿಮಗೆ ಏನೂ ಕಾಣಿಲ್ಲಿಲ್ಲವೆ ? ಅದರ ಅರ್ಥ ಏನೆಂದರೆ, ತಾವು ಇದರಲ್ಲಿ ಹೇಳಿರುವುದು ಬ್ಯಾಂಕ್ ನವರಿಗೆ ತಾವು ಏನು ಕೊಡುವಂಥ ಹಣ ಇದೆ, ಬಸ್ ಕಾಂಟ್ರಾಕ್ಟ್ ಕ್ಯಾರೇಜನವರಿಗೆ ಕೊಡುವಂಥ ಹಣ ಏನಿದೆ, ಆ ಹಣದ ಮೇಲೆ 6 ಪರ್ಸೆಂಟ್‌ಗೆ ಬದಲಾಗಿ ನಾವು 12 ಪರ್‌ಸೆಂಟ್‌ನಷ್ಟು ಬಡ್ಡಿ ಕೊಡುತ್ತೇವೆ ಎಂಬ ವಿಚಾರ ಇದೆ. ಆ ಉದ್ದೇಶ ಏತಕ್ಕಾಗಿ ಬಂತು ಅಂದರೆ, ಇಂಡಿಯನ್ ಬ್ಯಾಂಕ್ಸ್ ಆಸೋಸಿಯೇಶನ್ ನವರು ಮತ್ತು ಕೇಂದ್ರ ಸರಕಾರದವರು ಇದನ್ನು ಹೇಳಿದ್ದಾರೆ ಎಂಬ ಮಾತನ್ನು ಕೂಡ ತಾವು ಹೇಳಿದ್ದೀರಿ. ಇಲ್ಲಿ ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದರೂ ಸಹ ಸೆಕ್ಷನ್ 11 ಆ ರೀತಿಯಾಗಿ ಇಲ್ಲ. ತಾವು ಹೇಳಿದಂಥ ರೀತಿಯಲ್ಲಿ ಇದೆ.....

ಶ್ರೀ ಎಂ. ವೀರಪ್ಪ ಮೊಯಿಲಿ :– ನಾವು ಇವೊತ್ತು ಏನಾದರೂ ಮಾಡಿದ್ದರೆ ತಾವು ಹೇಳಿ. ಅದನ್ನು ಬಿಟ್ಟು 1976 ರಲ್ಲಿ ಏನಾದರೂ ಆಗಿದ್ದರೆ, ಅದನ್ನು ಈಗ ಇಲ್ಲಿ ಹೇಳಿದರೆ ಹೇಗೆ ?

ಶ್ರೀ ಹೆಚ್. ಏಕಾಂತಯ್ಯ :– ನಾವು ನಿಮ್ಮಷ್ಟು ಬುದ್ಧಿವಂತರಲ್ಲ ಸ್ವಾಮಿ. ಏಕೆಂದರೆ ನಾನು ಹೇಳುವ ವಿಚಾರದಲ್ಲಿ ನಿಮಗೆ ಇನ್ನೂ ಅನುಮಾನ ಇದೆ. ಒಟ್ಟಿನಲ್ಲಿ ಮಾತಿನಿಂದ ಏನೂ ಉಪಯೋಗವಿಲ್ಲ ಎಂದು ಹೇಳಬೇಕಾಗುತ್ತದೆ.....

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಏಕಾಂತಯ್ಯನವರು ಇಂಟರ್‌ಪಿಟೇಶನ್ ವಿಚಾರದಲ್ಲಿ ಬಹಳ ನಿಸ್ಸೀಮರು... ತಾವುಗಳು ತಮ್ಮ ವಿಚಾರಗಳನ್ನು ಹೇಳುವ ವಿಚಾರದಲ್ಲಿ ನಮ್ಮ ಅಡ್ಡಿ ಇಲ್ಲ ಆದರೆ... We are at particular amendment that has been brought today...

ಅದನ್ನು ತಾವುಗಳು ಸ್ಪಷ್ಟ ಓದಬೇಕು. ಈಗ ತಾವುಗಳು ಒಂದು ವಿಚಾರವನ್ನು ಓದಿದ್ದೀರಿ. ರೀಸನ್ಸ್ ಆಂಡ್ ಅಬ್ಜಕ್ಷನ್ಸ್‌ಗೆ ಆಗಿರತಕ್ಕಂಥ ತಿದ್ದುಪಡಿಯನ್ನು ಓದಿ. 3 ರಲ್ಲಿ ನಮ್ಮದು ಏನಾದರೂ ತಪ್ಪು ಇದ್ದರೆ ಏನಾದರೂ ಮಾಲಿಫೈಡ್ ಇದ್ದರೆ, ಏನಾದರೂ ಮೋಟಿವ್ ಇದ್ದರೆ ಆಥವಾ ಯಾರಿಗಾದರೂ ಲಾಭ ಮಾಡಿಕೊಡಬೇಕೆಂಬ ಉದ್ದೇಶವಿದ್ದರೆ ಆಥದನ್ನು ತಾವುಗಳು ಹೇಳಿದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಬಿಟ್ಟು ಯಾವುದನ್ನೋ ಲಿಂಕ್ ಮಾಡಿಕೊಂಡು, ಬಹುಶಃ 1976 ನೇ ಇಸವಿಯಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್‌ಗಳಲ್ಲಿ ಯಾರ್ಯಾರು ಏನೇನು ಹಣವನ್ನು ಮಾಡಿದ್ದರು, ಎಲ್ಲೆಲ್ಲಿ ಮಾಡಿದ್ದರು, ಅದರ ಇತಿಹಾಸವೆಲ್ಲ ತಮ್ಮಲ್ಲಿ ಇರಬಹುದು. I don't disagree with that... ನಾವು 1976 ರಲ್ಲಿ ಆದ ಕತೆಯನ್ನು 1976 ರಿಂದ 90 ರ ವರೆಗೆ ಕಾಂಟ್ರಾಕ್ಟ್ ಕ್ಯಾರೇಜ್‌ನಲ್ಲಿ ಯಾರ್ಯಾರಿಗೆ ಹಣ ಹೋಯಿತು, ಯಾರ್ಯಾರಿಗೆ ಹಣ ಬಂತು ಎಂದು ಹೇಳುವುದಿಲ್ಲ.

Is it relevant for this? The only limited question is there is a representation from the Bankers' Associat on that the interest rate at 6% is inadequate... ಈಗ ನಮ್ಮಲ್ಲಿ 12 ಪರಸೆಂಟ್‌ನಷ್ಟು ಮಾಡಿ ಎಂದು ಹೇಳುವಂಥ ಒಂದು ವಿಚಾರ ನಮ್ಮ ಮುಂದಿದೆ.

There is a demand and we have incorporated that clauge... ಇಂಥ ಒಂದು ಕ್ಲಾಸ್ ಮಾತ್ರ ಈಗ ಇರುವುದು. ಆದರಲ್ಲಿ ಏನಾದರೂ ಕೆಟ್ಟ ಕಡಿಮೆ ಇದ್ದರೆ any interpretation it could be appreciated, if there, anything there please enlighten us...

ಶ್ರೀ ಹೆಚ್. ಏಕಾಂತಯ್ಯ :– ಇವೊತ್ತಿನ ದಿವಸ ಬ್ಯಾಂಕ್‌ನವರಿಗೆ ಏನು ತಾವು ಪಾಪತಿ ಮಾಡಬೇಕಾದಂಥ ಹಣ ಇತ್ತು. ಅದಕ್ಕೆ ಮಾತ್ರ 12 ಪರ್‌ಸೆಂಟ್‌ರಷ್ಟು ಬಡ್ಡಿಯನ್ನು ಕೊಡಬೇಕೆಂಬ ಉದ್ದೇಶ ತಮಗಿಲ್ಲ. ಆ ಉದ್ದೇಶವನ್ನು ತಾವುಗಳು ಹೇಳಿದರೂ ಸಹ ಇದರಲ್ಲಿ ಈ ತಿದ್ದುಪಡಿಯಿಂದ ಕೇವಲ ಬ್ಯಾಂಕ್‌ನವರಿಗೆ ತಾವು 12 ಪರ್‌ಸೆಂಟ್ ಬಡ್ಡಿ ಕೊಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಬದಲಾಗಿ ಮತ್ತು ಇದಕ್ಕೆ ಸೇರಿದಂತೆ ಯಾರು ಸೆಕ್ಯೂರ್ಡ್ ಕ್ರೆಡಿಟರ್ಸ್ ಮತ್ತು ನಾನ್ ಬ್ಯಾಂಕರ್ಸ್ ಮತ್ತು ಇತರೆ ಇದಕ್ಕೆ ಸಂಬಂಧಪಟ್ಟವರು ಇದ್ದಾರೆ. ಅವರಿಗೂ ಸಹ ತಾವುಗಳು ಹಣವನ್ನು ಕೊಡಬೇಕಾಗುತ್ತದೆ. ಆದುದರಿಂದ ತಾವು ಕೇವಲ ಬ್ಯಾಂಕ್‌ನವರಿಗೆ ಕೊಡುವಂಥ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಎನ್ನುವಂಥ ಮಾತಿದೆಯಲ್ಲ ಅದು ಸತ್ಯಕ್ಕೆ ದೂರವಾದುದು. ಆದರ ಜೊತೆಯಲ್ಲಿ ತಾವು ಪ್ರೈವೇಟ್ ಫೈನಾನ್-ಶಿಯರ್ಸ್ ಯಾರಿದ್ದಾರೆ ಅವರಿಂದ ಸೆಕ್ಯೂರಿಟಿ ಆಗಿದ್ದರೆ, ಹೈಪಾಥಿಕೇಟ್ ಮಾಡಿ ಏನಾದರೂ ಅವರಿಂದ

ತಂದಿದ್ದರೆ ಅವರಿಗೂ ಸಹ 12 ಪರ್‌ಸೆಂಟ್ ಕೊಡಬೇಕಾಗುತ್ತದೆ. ಕಾನೂನು ಪ್ರಕಾರ ನೀವು ಕೇವಲ ಬ್ಯಾಂಕರ್ಸ್‌ಗೆ ಮಾತ್ರ ಹೇಳುತ್ತಿದ್ದೀರಿ ... for determination of claim ... ಕೊಡುವ ಉದ್ದೇಶದಿಂದ ಮಾತ್ರ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದ್ದರೆ ಇಷ್ಟು ವಾದ ಮಾಡುವ ಅವಶ್ಯಕತೆ ಇರುತ್ತಿರಲಿಲ್ಲ. ಈ ಉದ್ದೇಶವನ್ನು ತಾವುಗಳು ಅರ್ಥ ಮಾಡಿಕೊಳ್ಳಬೇಕು. ತಮಗೆ ಗೊತ್ತಿರುವ ಹಾಗೆ ಕೇವಲ ಬ್ಯಾಂಕರ್ಸ್‌ಗಳಿಂದ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮಾತ್ರ ಈ ಬಸ್‌ಗಳ ಮಾಲೀಕರು ಹಣವನ್ನು ಪಡೆದಿಲ್ಲ. ಇಲ್ಲಿ ಖಾಸಗಿ ಫೈನಾನ್ಷಿಯರ್ಸ್ ಯಾರಿದ್ದಾರೆ ಅವರಿಂದ ಲಕ್ಷಾಂತರ ಗಟ್ಟಲೆ ಹಣವನ್ನು ಸಾಲವಾಗಿ ಪಡೆದಿದ್ದಾರೆ. ಇವೊತ್ತು ಸೆಕ್ಯುರೇಟರ್ ಅವರೇ ಆದರೆ ಅವರೂ ಈ ಕಾನೂನಿನ ಅನ್ವಯ ಬರುತ್ತಾರೆ. ಅವರೆಲ್ಲರಿಗೂ ಲಾಭವನ್ನು ಮಾಡಿಕೊಡುತ್ತೀರಾ ಎಂಬ ಮಾತನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ದೃಷ್ಟಿಯಿಂದ ಯಾವುದನ್ನು ಕೇವಲ ಬ್ಯಾಂಕ್‌ನವರಿಗೆ ಮಾತ್ರ ತರಬೇಕೆಂದು ಬ್ಯಾಂಕ್ ಆಸೋಸಿಯೇಶನ್‌ನವರು ಮತ್ತು ಕೇಂದ್ರ ಸರಕಾರದವರು ಹೇಳಿದ್ದರು ಇದು ಅವರಿಗೆ ಮಾತ್ರ ಮಿಸಲಾಗಿಲ್ಲ, ಅವರ ಹೆಸರಿನಲ್ಲಿ ಖಾಸಗಿ ಫೈನಾನ್ಷಿಯರ್ಸ್ ಯಾರಿದ್ದಾರೆ ಅವರು ಲಕ್ಷಗಟ್ಟಲೆ ಹಣವನ್ನು ಬಡ್ಡಿ ರೂಪದಲ್ಲಿ ಕೆಗೆದುಕೊಳ್ಳುತ್ತಾರೆ. ಸರಕಾರವು ಅವರಿಗೂ ಇದನ್ನು ಕೊಡಬೇಕಾಗುತ್ತದೆ. ಆದುದರಿಂದ ಸೆಕ್ಯುರೇಟರ್ಸ್ ಎಂದು ತಾವು ಏನು ಹೇಳಿದ್ದೀರಿ. ಅದರ ಮುಂದೆ ಕೇವಲ ಬ್ಯಾಂಕ್‌ನವರಿಗೆ ಮಾತ್ರ ಅಪ್ಲೈ ಆಗುತ್ತದೆ ಎಂಬ ಮಾತನ್ನು ತಾವು ಹೇಳಬೇಕಾಗುತ್ತದೆ. ಆಗ ಮಾತ್ರ ಬ್ಯಾಂಕ್‌ನವರಿಗೆ ಮಾತ್ರ ಅಪ್ಲೈ ಆಗುತ್ತದೆ. ಇಲ್ಲದಿದ್ದರೆ ಆಗುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ನಾವು ಖಾಸಗಿಯವರಿಗೆ ಲಕ್ಷಗಟ್ಟಲೆ ಹಣವನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ತಾವುಗಳು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಉಳಿದ ವಿಚಾರಗಳ ಬಗ್ಗೆ ಮುಂದೆ ಸಂದರ್ಭೋಚಿತವಾಗಿ ಮಾತನಾಡುತ್ತೇನೆ. ಇವೊತ್ತಿನ ದಿವಸ ತಾವು ಏನು ಕಾನೂನನ್ನು ಅನ್ವಯ ಮಾಡಿದ್ದೀರಿ ಅದು ಹೇಗೆ ದುರುಪಯೋಗವಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಈಗ ಹೋಗುವುದಿಲ್ಲ. ಇವೊತ್ತಿನ ದಿವಸ ಈ ತಿದ್ದುಪಡಿ ಕುರಿತು ಹೇಳುವುದಾದರೆ. ಈ ಸೆಕ್ಯುರ್ಡ್ ಕ್ರೆಡಿಟರ್ಸ್ ಯಾರಿದ್ದಾರೆ ಅದು ಖಾಸಗಿಯವರು ಇರಬಹುದು, ಬ್ಯಾಂಕ್‌ನವರು ಇರಬಹುದು, ಅವರೆಲ್ಲರಿಗೂ ಹಣ ತೆರುವಂಥ ಪರಿಸ್ಥಿತಿ ಬರುವುದರಿಂದ ಇದನ್ನು ಕೇವಲ ಬ್ಯಾಂಕರ್ಸ್, ಮಾತ್ರ ಸೀಮಿತ ಗೊಳಿಸಬೇಕೆಂದು ಆಗ್ರಹಪೂರ್ವಕವಾಗಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೆ, ಮ್ಯಾಕ್ಸಿ ಕ್ಯಾಬ್ ವಿಚಾರದಲ್ಲಿ ಮಾನ್ಯ ಸಿಂಧ್ಯರವರು ರಾಜ್ಯ ಸಾರಿಗೆ ಸಂಸ್ಥೆಗೆ ನಷ್ಟವಾಗಬಹುದು ಎಂದು ಹೇಳಿದ್ದಾರೆ. ಅವರು ಹೇಳಿದಂತೆ ಸ್ವಲ್ಪ ನಷ್ಟವಾದರೂ ಆಗಬಹುದು. ಅದಕ್ಕಾಗಿ ನಾವು ಒಂದು ಸೀಟಿಗೆ 400 ರೂಪಾಯಿಗಳ ಟ್ಯಾಕ್ಸ್ ಹಾಕಿ ಮೂರು ತಿಂಗಳಿಗೆ 1,800 ರೂ. ಗಳಷ್ಟು ಟ್ಯಾಕ್ಸ್ ಕೊಡುವಂತೆ ಮಾಡಿದ್ದೇವೆ. ಟ್ಯಾಕ್ಸ್ ಕಡಿಮೆ ಇಟ್ಟರೆ ಅದಕ್ಕೆ ಕಾಂಪಿಟಿಷನ್ ಜಾಸ್ತಿ ಬರುತ್ತದೆ. ಆ ಉದ್ದೇಶಕ್ಕಾಗಿ ಹೀಗೆ ಮಾಡಲಾಗಿದೆ. ತಮಗೆ ಗೊತ್ತಿರುವಂತೆ ಗುಲ್ಬರ್ಗ.ಮುಂತಾದ ಮುಂತಾದ ಕಡೆಗಳಲ್ಲಿ ಕೆಲವೊಂದು ಸಾರಿ ಬಸ್‌ನ ಟಾಪ್ ಮೇಲೆ ಕುಳಿತು ಜನರು ಹೋಗುತ್ತಿರುವುದನ್ನು ನೋಡಿದ್ದೇವೆ. ಹೀಗೆ ಜನರ ಕಷ್ಟವನ್ನು ತಪ್ಪಿಸಬೇಕೆಂಬ ಉದ್ದೇಶವು ಈ ತಿದ್ದುಪಡಿಯಲ್ಲಿ ಇದೆ. ಈಗಾಗಲೇ ನಮ್ಮಲ್ಲಿ ಸುಮಾರು 7–8 ಸಾವಿರ ಮ್ಯಾಕ್ಸಿ ಕ್ಯಾಬ್‌ಗಳು ಓಡಾಡುತ್ತಾ ಇವೆ. ಅದನ್ನು ಗಮನದಲ್ಲಿಟ್ಟುಕೊಂಡು ಪರ್ಮಿಟ್ ಕೊಡುವಾಗ ಮಾನ್ಯ ಸದಸ್ಯರುಗಳು ಕೊಟ್ಟ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡೇ ಪರ್ಮಿಟ್‌ನ್ನು ಕೊಡುತ್ತೇವೆ. ಅದಕ್ಕಾಗಿ ಮೂರು ತಿಂಗಳಿಗೆ 4,800 ರೂ. ಗಳನ್ನು ಇಟ್ಟಿದ್ದೇವೆ. ಮಾನ್ಯ ಏಕಾಂತಯ್ಯನವರು ಒಂದು ವಿಚಾರವನ್ನು ಹೇಳಿದರು. ಖಾಸಗಿ ಫೈನಾನ್ಷಿಯರ್ಸ್‌ಗೆ ಲಾಭ ಮಾಡಿಕೊಡುವುದಕ್ಕಾಗಿ ಈ ತಿದ್ದುಪಡಿಯನ್ನು ತಂದಿದ್ದೀರಿ ಎಂದು ಹೇಳಿದ್ದಾರೆ. ಯಾವುದೇ ಒಂದು ತಿದ್ದುಪಡಿಯನ್ನು ತರುವಾಗ ಡಿಸ್ಕ್ರಿಮಿನೇಟ್ ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಯಾರಾದರೂ ಕೋರ್ಟಿಗೆ ಹೋಗುತ್ತಾರೆ. ಇಂಡಿಯನ್ ಬ್ಯಾಂಕ್ ಆಸೋಸಿಯೇಶನ್‌ನವರು ಮತ್ತು ಹೋಮ ಮಿನಿಸ್ಟ್ರಿಯವರು ಹೇಳಿದ್ದಕ್ಕಾಗಿ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ ಹೊರತು ಬೇರೆ ಯಾವ ಉದ್ದೇಶಕ್ಕಾಗಿ ಅಲ್ಲ. ದಯಮಾಡಿ ಈ ಬಿಲ್‌ನ್ನು ಅನುಮೋದಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ : "1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜ್‌ಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರ ವರೆಗೆ

ಅಧ್ಯಕ್ಷರು :– ಖಂಡ 2 ರಿಂದ 4 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 4 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ : "ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ. ಜೆ. ಜಾರ್ಜ್ (ನಗರಾಭಿವೃದ್ಧಿ ಮಂತ್ರಿಗಳು) (ಸಾರಿಗೆ ಮತ್ತು ಪಕ್ಷ ಮಂತ್ರಿಗಳ ಪರವಾಗಿ) :– ಮಾನ್ಯ ಉಪಾಧ್ಯಕ್ಷರೆಯವರೆ, "1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ : "1990 ರ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ರೈತರ ಸಾಲ ಮನ್ನಾ ಬಗ್ಗೆ ಧರಣಿ ಕುಳಿತಿರುವವರನ್ನು ಕುರಿತು :

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) :– ಮಾನ್ಯ ಉಪಾಧ್ಯಕ್ಷರೆಯವರೆ, ಇವತ್ತು ಬೆಳಿಗ್ಗೆಯಿಂದ ರೈತರ ಸಾಲದ ಸಮಸ್ಯೆಯ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಬಿ. ಜೆ. ಪಿ. ಪಕ್ಷದ ಸದಸ್ಯರು ಸರ್ಕಾರದಿಂದ ಬಂದಿರತಕ್ಕಂಥ ಉತ್ತರದಿಂದ ಅಸಮಾಧಾನಗೊಂಡು ಧರಣಿಯನ್ನು ಮಾಡುತ್ತಿದ್ದಾರೆ. ಈಗ ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಇರುತ್ತಾರೆ ಎಂದು ದೇಳಿ ಭಾವಿಸಿದ್ದೆ. ಆದರೆ ಅವರು ಇಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದ್ದಾರೆ. ಬೆಳಿಗ್ಗೆ ಈಗ ನಾವು ನಾಲ್ಕು ಜನ ಆಲ್ಲಿ ಕುಳಿತುಕೊಂಡಿದ್ದಾರೆ ಎಂದು ಹೇಳಿ ನಾವು ಸರ್ಮಕ್ಷದಿಂದ ಅದನ್ನು ಉದಾಹರಿಸಿ ಮಾಡಿ ಸಭೆಯನ್ನು ನಡೆಸಿಕೊಂಡು ಹೋಗಬಹುದು. ಆದರೆ ಅವರು ಒಂದು ಜವಾಬ್ದಾರಿ ರಾಷ್ಟ್ರೀಯ ಪಕ್ಷದ ಸದಸ್ಯರುಗಳಾಗಿದ್ದಾರೆ. ಅವರು ಹೇಳತಕ್ಕಂಥಾದ್ದು ಕೂಡಾ ರೈತರ ಒಂದು ಸಮಸ್ಯೆಯನ್ನು ಹೇಳಿದ್ದಾರೆಯೇ ಹೊರತು ಅಥವಾ ಅವರ ಪಕ್ಷದ ಪ್ರತಿಷ್ಠೆಯ ಪ್ರಶ್ನೆ ಎಂದು ಹೇಳಿ ಅವರು ಮಾಡಿಕೊಂಡಿಲ್ಲ ಎಂದು ಹೇಳಿ ನಾನು ತಿಳಿದಿದ್ದೇನೆ. ಈಗ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮತ್ತು ಸಭಾನಾಯಕರು ಸೇರಿ ಅವರನ್ನು ನಾಳೆ ಬೆಳಿಗ್ಗೆ ಸಭೆ ಸೇರುವುದರೊಳಗಾಗಿ ಅವರನ್ನು ಕರೆಸಿ ಮಾತನಾಡಿ ಈ ಧರಣಿಯನ್ನು ಕೊನೆಗಾಣಿಸಲಿಕ್ಕೆ ಒಂದು ಪ್ರಯತ್ನವನ್ನು ಮಾಡಬೇಕು ಮತ್ತು ತಾವೂ ಸಹಿತ ಇದಕ್ಕೋಸ್ಕರ ಒಂದು ಪ್ರಯತ್ನವನ್ನು ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಬಿ. ಜೆ. ಪಿ. ಸದಸ್ಯರುಗಳು ಘೋಷಣೆಯನ್ನು ಕೂಗುತ್ತಿದ್ದರು.)

ಪ್ರತಿಭಟನೆಯನ್ನು ಮಾಡಲಿಕ್ಕೆ ನಾನಾ ವಿಧಾನಗಳು ಇರುತ್ತವೆ. ಅವರು ಅದನ್ನು ಮಾಡಿದ್ದಾರೆ. ಅವರ ಆಕ್ರೋಶವನ್ನು ಮತ್ತು ಅವರ ಸಮಸ್ಯೆಯನ್ನು ಪ್ರತಿಬಿಂಬಿಸಬೇಕು ಎಂದು ಹೇಳಿ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಅವರುಗಳು ಇಲ್ಲಿ ಮಾಡಿರುವುದೇನೆಂದರೆ ಇಲ್ಲಿ ಕುಳಿತುಕೊಳ್ಳದೆ ಅಲ್ಲಿ ಹೋಗಿ ಕುಳಿತುಕೊಂಡಿದ್ದಾರೆ. ಅವರ ಪಕ್ಷದ ಒಂದು ರಾಷ್ಟ್ರೀಯ ತೀರ್ಮಾನವಾದುದರಿಂದ ಎಂದು ಹೇಳಿ ಅವರು ಅಲ್ಲಿ ಕುಳಿತುಕೊಂಡಿದ್ದಾರೆ. ಅಂದರೆ ಧರಣಿಯನ್ನು We have accepted it as a norm in the House ನಾವು ಮಾಡಿದ್ದೇವೆ. ನೀವು ಮಾಡಿದ್ದೀರಿ. ಮುಂದೆ ಮಾಡುವವರು ಇದ್ದೇವೆ. ಈ ಕಡೆ ಇದ್ದಾಗ ನೀವುಗಳು ಕೂಡಾ ಮಾಡಿದ್ದೀರಿ. ಇವೆಲ್ಲ ಆಗತಕ್ಕಂಥದ್ದೆ. ಆದುದರಿಂದ ನಾನು ಅವರಿಗೆ ಸಂಪೂರ್ಣವಾಗಿ ನೀವು ಆಲ್ಲಿಯೇ ಕುಳಿತುಕೊಳ್ಳಿ, ನಾವು ಸಭೆಯನ್ನು ನಡೆಸಿಕೊಂಡು ಹೋಗುತ್ತೇವೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಮತ್ತೆ ಇದಕ್ಕಿಂತ ಮುಖ್ಯವಾಗಿ ಬಹಳ ಮಹತ್ವರವಾದ...